ಸಾಕ್ಷಿಯನ್ನು ದಿ:26.07.2023 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-1

**ಪಾಟೀಸವಾಲುಃ- ವಾದಿಗಳ ಪರ ವಕೀಲರಿಂದ ಃ-**

1. ವಾದಿಯರು ಪ್ರತಿವಾದಿ 1 ಮತ್ತು 2 ರವರಿಗೆ ಸಹೋದರಿಯರಾಗಬೇಕು. ಮಾದೇಗೌಡ ವಾದಿಯರು ಮತ್ತು ಪ್ರತಿವಾದಿ 1 ಮತ್ತು 2 ರವರ ತಂದೆಯಾಗಬೇಕು ಎಂದರೆ ಸರಿ. ನನ್ನ ತಾತನ ಹೆಸರು ಚೌಡೇಗೌಡ. ನಮ್ಮ ತಾತ ದಾವಾ ಸ್ವತ್ತನ್ನು 1956 ರಲ್ಲಿ ಖರೀದಿ ಮಾಡಿದ ನಂತರ ಖಾತೆ ಮಾಡಿಸಿಕೊಳ್ಳಲು ಯಾವ ತೊಂದರೆಯಿತ್ತು ಎಂದರೆ ಗೊತ್ತಿಲ್ಲ. ಸದರಿ ಕ್ರಯಪತ್ರ ಸೃಷ್ಟಿ ಮಾಡಿಕೊಂಡ ಕಾರಣ ಖಾತೆ ಮಾಡಲು ಅರ್ಜಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾತ ಖಾತೆ ಮಾಡಲು ಅರ್ಜಿ ಕೊಟ್ಟ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಯಾವ ಕಾರಣಕ್ಕೆ ದಾವಾ ಆಸ್ತಿ ಖಾತೆಯಾಗಿರುವುದಿಲ್ಲವೆಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಕಂದಾಯ ಅಧಿಕಾರಿಗಳು ಖಾತೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ನಮ್ಮ ಕುಟುಂಬದವರು ಖಾತೆ ಮಾಡಿಕೊಡಲು ಯಾವುದೇ ಅರ್ಜಿ ಸಲ್ಲಿಸಿಲ್ಲ. ಸೃಷ್ಟಿಕೃತ ಕ್ರಯಪತ್ರವಾದ ಕಾರಣ ನಾವುಗಳು ಖಾತೆ ಮಾಡಿಸಿಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾತನಿಗೆ ಮೂರು ಜನ ಮಕ್ಕಳು ಅವರುಗಳೆಂದರೆ ಸಿದ್ದೇಗೌಡ, ಭೂತೇಗೌಡ ಮತ್ತು ಮಾದೇಗೌಡ. ಸದರಿ ಮೂರು ಜನರು ವಿಭಾಗವಾಗಿದ್ದಾರೆಂದರೆ ಸರಿ. ವಿಭಾಗವು ಮೌಖಿಕವಾಗಿ ಆಗಿರುತ್ತದೆ ಸದರಿ ವಿಭಾಗದಲ್ಲಿ ದಾವಾ ಸ್ವತ್ತು ನನ್ನ ತಂದೆಗೆ ಬಂದಿರುತ್ತದೆ. ದಾವಾ ಸ್ವತ್ತು ನನ್ನ ತಂದೆ ಭಾಗಕ್ಕೆ ಬಂದಿತ್ತೆಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನಾನು ನಮ್ಮ ತಂದೆ ಭಾಗಕ್ಕೆ ದಾವಾ ಆಸ್ತಿ ಬಂದಿರುತ್ತದೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ತಂದೆಯ ಭಾಗಕ್ಕೆ ದಾವಾ ಆಸ್ತಿ ವಿಭಾಗದಲ್ಲಿ ಬಂದ ನಂತರ ಖಾತೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 2006 ರಲ್ಲಿ ನಾನು ಪ್ರತಿವಾದಿ 1 ಮತ್ತು 2 ರವರನ್ನು ದಾವಾ ಸ್ವತ್ತನ್ನು ಖಾತೆಯಾಗಿಲ್ಲ ಎಂದು ಕೇಳಿದಾಗ ಅವರು ಪುನಃ ಕ್ರಯಪತ್ರ ಬರೆದುಕೊಡುತ್ತೇವೆಂದು ತಿಳಿಸಿರುತ್ತಾರೆ. 1956 ರ ಕ್ರಯಪತ್ರದ ಆಧಾರದ ಮೇಲೆ ಘೋಷಣೆ ಕೋರಿ ನಾವು ಯಾವುದೇ ದಾವೆ ಸಲ್ಲಿಸಿಲ್ಲ. ಪ್ರತಿವಾದಿ 1 ಮತ್ತು 2 ರವರು ಮತ್ತೆ ಕ್ರಯಪತ್ರ ಬರೆಸಿಕೊಳ್ಳಲು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವತ್ತೂ ವಾದಿಯರನ್ನು

ಭೇಟಿ ಮಾಡಿರುವುದಿಲ್ಲ ಮತ್ತು ವಾದಿಯರು ಯಾವತ್ತೂ ಕ್ರಯಪತ್ರ ಬರೆದುಕೊಡುತ್ತೇವೆಂದು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.4 ರಲ್ಲಿ ವಾದಿಯರು ಪಕ್ಷಕಾರರಾಗಿರುವುದಿಲ್ಲ. ವಾದಿಯರನ್ನು ನಿಪಿ.4 ರಲ್ಲಿ ಪಕ್ಷಕಾರರನ್ನಾಗಿ ಮಾಡಲು ತೊಂದರೆಯಿರಲಿಲ್ಲ. ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಉದ್ದೇಶಪೂರ್ವಕವಾಗಿ ಅವರನ್ನು ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ.4 ರಲ್ಲಿ 1956 ರ ಕ್ರಯಪತ್ರದ ಕುರಿತು ತಿಳಿಸಿಲ್ಲ. ದಾವಾ ಸ್ವತ್ತನ್ನು 1956 ರಲ್ಲೇ ಸ್ವಾಧೀನ ಪಡೆದುಕೊಂಡಿರುತ್ತೇವೆಂದು ನಿಪಿ.4 ರಲ್ಲಿ ತಿಳಿಸಿಲ್ಲ. ನಿಪಿ.4 ರಲ್ಲಿ ಪ್ರತಿವಾದಿ 1 ಮತ್ತು 2 ರವರು ಸ್ವಾಧೀನದಲ್ಲಿರುವ ಜಮೀನು ಎಂದು ಬರೆಯಲಾಗಿದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಾವು ಯಾವತ್ತೂ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಮಾದೇಗೌಡ ನನ್ನ ತಾತನಿಗೆ ಯಾವುದೇ ಕ್ರಯಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.5 ಮತ್ತು 6 ನ್ನು ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇವೆಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರು ವಾದಿಯರಿಗೆ ದಾವಾ ಸ್ವತ್ತನ್ನು ದಾನಪತ್ರ ಬರೆದುಕೊಟ್ಟ ಬಗ್ಗೆ ಗೊತ್ತಿಲ್ಲ. ನನಗೆ ಪ್ರತಿವಾದಿಯರು ವಾದಿಯರಿಗೆ ದಾವಾ ಸ್ವತ್ತನ್ನು ದಾನ ಬರೆದುಕೊಟ್ಟ ಬಗ್ಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಿಪಿ.4 ರ ಕ್ರಯಪತ್ರ ಕಾನೂನಿನಲ್ಲಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ನಿಪಿ.1 ಮತ್ತು 2 ರ ದಾನಪತ್ರಗಳನ್ನು ನಾನು ಪ್ರಶ್ನೆ ಮಾಡಿಲ್ಲ. ನಿಡಿ.5 ರಲ್ಲಿ ದಾನಪತ್ರ ಬರೆದ ಬಗ್ಗೆ ನಮೂದು ಮಾಡಿದೆ ಎಂದರೆ ಸರಿ. ದಾನಪತ್ರ ಬರೆದುಕೊಟ್ಟ ಬಗ್ಗೆ ಈ ಹಿಂದೆಯೇ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ಯಾವುದೇ ಹಕ್ಕು ಪಾಪ್ತವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ಕುಟುಂಬದವರು ದಾವಾ ಸ್ವತ್ತಿನಲ್ಲಿ ಎಂದು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿ 1 ಮತ್ತು 2 ರವರ ಜೊತೆ ಷರೀಕ್ಕಾಗಿ ಕ್ರಯಪತ್ರ ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

OS 20 of 2015

**1 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ**
**ಮಳವಳ್ಳಿ.**